


### ಅಭಿನಂದನೆ

ನಟನೆಯಲ್ಲಿ ಸಾಧನೆ ಮಾಡಿ, ರಾಷ್ಟ್ರ ಪ್ರಶಸ್ತಿ ಗಳಿಸಿದ ಹೆಮ್ಮೆಯ ಕನ್ನಡಿಗರಾದ ಉಮಾಶ್ರೀ ಹಾಗೂ ಪ್ರಕಾಶ್ ರೈ ಅವರಿಗೆ ಕನ್ನಡಿಗರೆಲ್ಲರ ಪರವಾಗಿ ಅನಂತ ಅಭಿನಂದನೆಗಳು.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ದುನಿಯಾ ವಸಂತ್, ದಾವಣಗೆರೆ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಪ್ರಕಾಶ್ ಜಿ.ಕಾಳಗಿ, ವಿಜಾಪುರ/ ದೇಬೂರು ಮಂಜುನಾಥ/ ಎಚ್.ಎನ್. ವಿಶ್ವನಾಥ್, ಶಿವಮೊಗ್ಗ/ ರಘುನಾಥ ರಾವ್ ತಾಪ್ಸೆ, ದಾವಣಗೆರೆ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜ ನಗರ/ದೇಶವಳ್ಳಿ ಶಿವು, ಸಂತೇಮರ ಹಳ್ಳಿ/ ಬಿ.ಎಸ್.ರಮೇಶ್, ಬೆಂಗಳೂರು

### ಅನ್ನ ನೀಡಿದ ನಾಟಕ ಕಂಪೆನಿ

ಬೆಂಗಳೂರು ಸುತ್ತ ಹಳ್ಳಿಗಳಲ್ಲಿ ಪೌರಾಣಿಕ, ಸಾಮಾಜಿಕ ನಾಟಕ ಮಾಡಿ ಕೊಂಡಿದ್ದ ಉಮಾಶ್ರೀ ಚಿತ್ರಗಳಲ್ಲಿ ನಟಿಸಲು ಆರಂಭಿಸಿದ ನಂತರ ಅಲ್ಲಿಯೂ ಅನಿಶ್ಚಿತತೆ ಇತ್ತು. ಚಿತ್ರ ನಟಿ ಹೆಸರು ಬಳಸಿಕೊಂಡು ಆಕೆಯ ಹೊಟ್ಟೆ ತುಂಬಿಸಿದ್ದು ಮತ್ತು ಜನಪ್ರಿಯತೆ ತಂದು ಕೊಟ್ಟದ್ದು ಉತ್ತರ ಕರ್ನಾಟಕದ ನಾಟಕ ಕಂಪೆನಿಗಳು. ಕಂಪೆನಿ ಕಲಾವಿದರು, ಮಾಲೀಕರು, ವಿಶೇಷವಾಗಿ ಬಿ.ಆರ್. ಅರಿಷಿಣಗೋಡಿ ಅವರಿಗೂ ಕೃತಜ್ಞತೆ ಸಲ್ಲಿಸಿದ್ದರೆ ಉಮಾಶ್ರೀ ಘನತೆ ಇನ್ನೂ ಹೆಚ್ಚುತ್ತಿತ್ತು.

–ಶಿವರಾಜ ಪಾಟೀಲ, ಗುಲ್ಬರ್ಗ

### ಕಥಾರಂಗಂ ಪ್ರಶಸ್ತಿಗೆ ಆಹ್ವಾನ

ಬೆಂಗಳೂರಿನ ಸಾಹಿತ್ಯ ವೇದಿಕೆ 2009ನೇ ಸಾಲಿನ ಕಥಾರಂಗಂ ಕನ್ನಡ ಕಥಾಪ್ರಶಸ್ತಿ ಮತ್ತು ಕವನ ಪ್ರಶಸ್ತಿ ಗಾಗಿ ಕಥೆ ಮತ್ತು ಕವನಗಳನ್ನು ಆಹ್ವಾನಿಸಿದೆ.

ಆಸಕ್ತರು 2008 ಜನವರಿಯಿಂದ 2008 ಡಿಸೆಂಬರ್ ಅವಧಿಯಲ್ಲಿ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟವಾದ ತಮ್ಮ ಕಥೆ ಅಥವಾ ಕವನದ ನಾಲ್ಕು ಪ್ರತಿಗಳನ್ನು ಅಕ್ಟೋಬರ್ 10ರ ಒಳಗಾಗಿ ಕಳುಹಿಸಿ ಕೊಡಬೇಕು. ಬಹುಮಾನ 1,000ರೂ. ನಗದು, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನೊಳಗೊಂಡಿದೆ. ವಿಳಾಸ: ಕಾರ್ಯದರ್ಶಿ, ಕಥಾರಂಗಂ ಪ್ರಶಸ್ತಿ ಸಮಿತಿ, ನಂ. 330, 6ನೇ ಕ್ರಾಸ್, ಬೃಂದಾವನ ಬಡಾವಣೆ, ಶೆಟ್ಟಿಹಳ್ಳಿ, ಬೆಂಗಳೂರು–560015. ಹೆಚ್ಚಿನ ವಿವರಗಳಿಗೆ ಫೋನ್ ನಂ: 080–22721745, ಮೊ. 9880079676 ಅಥವಾ katharangam@rediffmail.com ಸಂಪರ್ಕಿಸಬಹುದು.

### ದೇಹ ಪ್ರದರ್ಶನವೇ ಮುಖ್ಯ!

ಆಟಕ್ಕಿಂತ ದೇಹ ಪ್ರದರ್ಶನವೇ ಮುಖ್ಯವಾಗಿರುವ, ಬೀಚ್ ವಾಲಿ ಬಾಲ್‌ನ ಮತ್ತೊಂದು ಮುಖವಾಗಿರುವ ಲಿಂಗಿರಿ ಫುಟ್‌ಬಾಲ್ ಲೀಗ್ ಜನಪ್ರಿಯ ಎನಿಸಿರುವುದರಲ್ಲಿ ವಿಶೇಷ ಏನೂ ಇಲ್ಲ. ಮಹಿಳಾ ವಾದಿಗಳು ಇಂತಹ ವಿಕೃತಿಗಳ ವಿರುದ್ಧ ಸುಮ್ಮನೆ ಇರುವುದೇಕೋ ತಿಳಿಯದಾಗಿದೆ.

–ದೀಪಕ್, ಕಂಬದಕೋಣೆ

### ಪ್ರಬುದ್ಧ ಕಥೆ

ತಂಬ್ರಹಳ್ಳಿ ರಾಮನಮಲಿ ಅವರ 'ಸಿದ್ದಪ್ಪ ಶಿವ ಎಂಬ ನಾಪಿತನ ಕತೆ' ಗ್ರಾಮೀಣ ಸೊಗಡಿನ ಹಿನ್ನೆಲೆಯಲ್ಲಿ, ಕತೆಗಾರರು ಪ್ರಬುದ್ಧವಾದ ಸ್ವಂತಿಕೆ ಕಾಪಾಡಿಕೊಂಡು ಅಭಿವ್ಯಕ್ತಿಸಿದ್ದಾರೆ.

–ಕೆ.ಬಸವನಗೌಡ,ಹಗರಿಬೊಮ್ಮನಹಳ್ಳಿ /ಕೊಹಿಮ, ಬಸರಕೋಡು

### ಇಳಿಯದ ಒಲವು

'ಪದುಮ'ಳು ಇನ್ನಿಲ್ಲ (ಕೆ.ಎಸ್. ನೀಳಾ). ಕವಿಗೋಷ್ಠಿಯೊಂದರಲ್ಲಿ ಇಳಿವಯಸ್ಸಿನ ಕೆ.ಎಸ್.ನ. ಹೇಳಿದ್ದು ನೆನಪಾಯಿತು: 'ಈಗಲೂ ನಾನು ಪ್ರೇಮ ಪದ್ಯಗಳನ್ನು ಬರೆಯುತ್ತೇನೆ– ಮನೆಯಾಕೆಗೆ ಗೊತ್ತಾಗದ ಹಾಗೆ!'

–ಸಿಪಿಕೆ, ಮೈಸೂರು

### ಆರೋವಿಲ್ ಸರಿ

ಸೆ. 17ರ 'ಸುಧಾ' ಸಂಚಿಕೆಯಲ್ಲಿ ಪ್ರಕಟವಾದ ಡಾ. ಜಯಕರ ಭಂಡಾರಿ ಬರೆದ. 'ಆರೋವಿಲ್ಲೆ' ಎಂಬ ಲೇಖನಕ್ಕೆ ಒಂದು ಪ್ರತಿಕ್ರಿಯೆ: ಆ ನಗರದ ಹೆಸರು 'Areoville' ಎಂದು ಬರೆದರೂ ಉಚ್ಚಾರಣೆ 'ಆರೋವಿಲ್.' ಅದರ ಅರ್ಥ 'ಉಷಾನಗರಿ', 'ಆರೊ' ಎಂದರೆ ಪ್ರಭೆ, ಪ್ರಭಾವಳಿ, ಉಷೆ. ಉಷಾನಗರಿ, ಭವಿಷತ್ ಮನುಕುಲದ ನೆಲೆ. ಶ್ರೀಮಾತೆ ಇಟ್ಟ ಹೆಸರು. ವಿಶ್ವಮಾನವನ ಬೀಡು.


ಶ್ರೀಮಾತೆಯ ಹೆಸರು 'ಮಿರಾ ಅಲ್ಫಾಸಾ'; ಮಿರ್ರ ಅಲ್ಲ, ಅವರು ಶ್ರೀ ಅರವಿಂದರ ಶಿಷ್ಯರಾಗಿ ಬರಲಿಲ್ಲ. ಶ್ರೀ ಅರವಿಂದರು ದೀಕ್ಷೆ ಕೊಡಲಿಲ್ಲ. ವಾಡಿಕೆಯಲ್ಲಿರುವ 'ಗುರು–ಶಿಷ್ಯ' ಸಂಬಂಧ ಇರಲಿಲ್ಲ. ಅವರು ಶ್ರೀ ಅರವಿಂದರ ಉತ್ತರಾಧಿಕಾರಿಯೂ ಆಗಿರಲಿಲ್ಲ. ಅವರು ಶ್ರೀ ಅರವಿಂದರ ಯೋಗಸಾಧನೆಯ ಸಹಕಾರಿಣಿ. 'ಮಾತೃ ಮಂದಿರ ಚಿರಪರಿಚಿತವಾದ ಭಜನಾ ಮಂದಿರವಲ್ಲ. ಅಲ್ಲಿ ತಾಳ, ತಂಬೂರಿ, ಮದ್ದಳೆ ಪ್ರಾರ್ಥನೆ, ಭಜನೆಯ ಸದ್ದಿಲ್ಲ.

–ಕೋ. ಚೆನ್ನಬಸಪ್ಪ, ಬೆಂಗಳೂರು

### ದಂಗೆ ಶ್ರೇಷ್ಠ: ಕೈಬಿಟ್ಟ ಮಾಹಿತಿ

1979ರಲ್ಲಿ ದಂಗೆ ಎದ್ದ ಮಕ್ಕಳು ಚಿತ್ರಕ್ಕೆ ಶ್ರೇಷ್ಠ ಮಕ್ಕಳ ಚಿತ್ರ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದೆ. ಅದರ ನಿರ್ದೇಶಕ ವಾದಿರಾಜ್‌ಗೆ ರಜತ ಕಮಲ ಪ್ರಶಸ್ತಿ ಬಂದಿದೆ. ಅಮೃತಗನ್ನಡದ ಸುವರ್ಣಗನ್ನಡಿ ಲೇಖನದಲ್ಲಿ ಈ ವಿಷಯ ಕೈಬಿಟ್ಟುಹೋಗಿದೆ.

–ಹರಿಣಿ, ಬೆಂಗಳೂರು


ಕನಸುಗಳು ಬರುವುದೇ ನೀವು ಗಾಢ ನಿದ್ರೆಯಲ್ಲಿರುವಾಗ. **ರಿಕ್ರಾನ್® ಸರ್ಟಿಫೈಡ್** ತಲೆದಿಂಬುಗಳಿಂದಾಗಿ ತಕ್ಷಣವೇ ಜೋಗುಳ ಹಾಡಿ ನಿಮ್ಮನ್ನು ನಿದ್ರಾ ದೇವಿಯ ವಶಕ್ಕೊಪ್ಪಿಸಿದಂತಾಗುವುದು. ಇದುವೇ ವಿಶೇಷ ರಿಕ್ರಾನ್® ಫೈಬರ್‌ಫಿಲ್ HBP1 ಮಾಡುವ ಚಮತ್ಕಾರ. ಮೆತ್ತಮೆತ್ತಗೆ ಹಾಗೂ ಆರಾಮದಾಯಕವಾದ ಈ ತಲೆದಿಂಬುಗಳನ್ನು ನಿಮ್ಮ ಕುತ್ತಿಗೆಗೆ ಅತ್ಯಂತ ಸಮರ್ಪಕ ಬೆಂಬಲ ನೀಡಲೆಂದೇ ತಯಾರಿಸಲಾಗಿದೆ. ನಮ್ಮ ಉದ್ದೇಶ, ನೀವು ಚೆನ್ನಾಗಿ ನಿದ್ರಿಸಬೇಕು ಮತ್ತು ಪ್ರತಿ ರಾತ್ರಿಯೂ ಸವಿಗನಸುಗಳನ್ನು ಕಾಣಬೇಕೆಂಬುದಷ್ಟೇ.

**ಕನಸುಗಳನ್ನು ಸದಾ ಉಳಿಸಿಕೊಳ್ಳಿರಿ**

ಹಲವು ವರ್ಷಗಳ ನಂತರವೂ ನೀವು ನಿಮ್ಮ ಕನಸುಗಳನ್ನು ಮರಳಿ ಕಾಣಲು ಬಯಸಲಾರಿರೇ? ಅಥವಾ ನೀವು ಕಂಡ ವಿಚಿತ್ರ ಕನಸುಗಳಿಗೆ ಅರ್ಥ ಕಲ್ಪಿಸಲು ಇಚ್ಛಿಸಲಾರಿರೇ? www.dreamdiary.inನಲ್ಲಿ ನಿಮ್ಮದೇ ಸ್ವಂತ ಫೋಲ್ಡರ್‌ನಲ್ಲಿ ನಿಮ್ಮ ಕನಸುಗಳನ್ನು ಪೋಸ್ಟ್ ಮಾಡಿ ಇರಿಸಿರಿ. ಇನ್ನೀಗ ನೀವು ನಿಮ್ಮ ಕನಸುಗಳನ್ನು ಎಂದೂ ಕಳಕೊಳ್ಳಲಾರಿರಿ.

- ಮುಂದುವರಿದ ತಂತ್ರವಿಜ್ಞಾನ
- ತ್ವರಿತ ಒಣಗುತ್ತದೆ
- ಮೆತ್ತಮೆತ್ತಗೆ ಮತ್ತು ಆರಾಮದಾಯಕ
- ದೀರ್ಘ ಬಾಳುತ್ತದೆ




www.dreamdiary.in

ರಿಕ್ರಾನ್® ಸರ್ಟಿಫೈಡ್ ಹೋಮ್ ಕಂಫರ್ಟ್ ಶ್ರೇಣಿ: • ಕ್ವಿಲ್ಟ್ • ತಲೆದಿಂಬುಗಳು (ಪ್ಯಾರಡೈಸ್/ಜಾಯ್/ಬ್ಲಿಸ್/ಪ್ಲಶ್) • ಮಲ್ಟಿಮ್ಯಾಟ್ಸ್

ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿರಿ: recron.certified@ril.com ಅಥವಾ ಕರೆ ನೀಡಿರಿ: 080-41470088/ 080-41499857.

ರಿಕ್ರಾನ್® ಸರ್ಟಿಫೈಡ್ ಇದು ನಮ್ಮ ಹೋಮ್ ಕಂಫರ್ಟ್ ಉತ್ಪಾದನಗಳ ಶ್ರೇಣಿಗಾಗಿ ರಿಲಾಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್ ಆಗಿದೆ.

SAATCHI & SAATCHI-260/2009 M KAN